ಶಿರಾ ತಾಲ್ಲೂಕಿನ ಬುಕ್ಕಾ ಪಟ್ಟಣ ಆರಕ್ಷಕ ಉಪಠಾಣೆಯನ್ನು ಮೇಲ್ದರ್ಜೆಗೆ ಏರಿಸುವುದು

2070 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಬುಕ್ಕಾ ಪಟ್ಟಣವು ಹೋಬಳಿ ಮುಖ್ಯ ಕೇಂದ್ರವಾಗಿದ್ದು, ಅಲ್ಲಿನ ಆರಕ್ಷಕ ಉಪ ಠಾಣೆಯ ವ್ಯಾಪ್ತಿಯಲ್ಲಿ ದಿನೇ ದಿನೇ ಅಪರಾಧಗಳು ಹೆಚ್ಚಾಗುತ್ತಿದ್ದು ಕಾನೂನು ಮತ್ತು ವ್ಯವಸ್ಥೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಸದರಿ ಉಪ ಠಾಣೆಯನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಉಳ್ಳಾಲ ಕ್ಷೇತ್ರದ ಬೆಳ್ಮ ತೋಡಿನ ಆಭಿವೃದ್ಧಿ

2071 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಬೆಳ್ಮ ಕಲಾಣಜಿ, ಅಂಟ್ಲೆ ಮೊಗರು, ಮೂನೂರು ಗ್ರಾಮಗಳ ಮೂಖಾಂತರ ಹಾದು ಹೋಗುವ ಬೆಳ್ಮ ತೋಡಿನ ಅಭಿವೃದ್ಧಿ ಕಾಮಗಾರಿ ಎಷ್ಟು ವರ್ಷಗಳಿಂದ ರಾಜ್ಯ ಮುಂಗಡ ಪತ್ರದಲ್ಲಿ ನಮುದಾಗಿದೆ, ಹಾಗೂ ಆ ಸಂದರ್ಭದಲ್ಲಿ ಇದರ ಅಂದಾಜು ವೆಚ್ಚ ಮತ್ತು ಮುಂಗಡ ಪತ್ರದಲ್ಲಿ ಈ ಕಾಮಗಾರಿಗೆ ಕಾದಿರಿಸಿದ ಅನುದಾನವೆಷ್ಟು?*

ಆ) *ಈ ಕಾಮಗಾರಿಗೆ ಇಲಾಖೆಯಿಂದ ಶಿಫಾರಸ್ಸು ಮಾಡಿ ಅಂಗಡಿ ಸಮಿತಿಯ ಅನುಮೋದನೆ ಕೊಟ್ಟರು ಕೂಡಾ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಿರಲು ಕಾರಣವೇನು?*

ಇ) *1996-97ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಡಿ 1.5 ಕೋಟಿ ಅನುದಾನ ಮುಂಗಡ ಪತ್ರದಲ್ಲಿದ್ದರೂ, ಈ ಕಾಮಗಾರಿಗೆ ಸಾಕಷ್ಟು ಅನುದಾನ ಬಿಡುಗಡೆ ಮಾಡದಿರಲು ಕಾರಣವೇನು?*

ಈ) *ಬೆಳ್ಮತೋಡಿನ ಹೂಳೆತ್ತುವ ಕಾಮಗಾರಿ ಈ ಭಾಗದ ಸಾವಿರಾರು ರೈತರ ಕಣ್ಣೀರೊರೆಸುವ ಕಾಮಾಗಾರಿಯಾಗಿದ್ದು, ಸರ್ಕಾರ ಇದನ್ನು ಯಾವಾಗ ಆರಂಭಿಸುವುದು ಮತ್ತು ಯಾವಾಗ ಪೂರೈಸುವುದು?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) 4 (ನಾಲ್ಕು) ವರ್ಷಗಳಿಂದ, ವಿವರ ಈ ಕೆಳಕಂಡಂತಿದೆ:

ಕ್ರ.ಸಂ.	ವರ್ಷ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಅನುದಾನ ರೂ. ಲಕ್ಷ ಗಳಲ್ಲಿ
1.	1994-95	10.00	2.00
2.	1995-96	10.00	1.00
3.	1996-97	10.00	0.30
4.	1997-98	67.00	0.01

ಆ) ಬಿ.ಸಿ. ಅಂಗಡಿಯವರ ಸಮಿತಿಯ ಸಭೆಯಲ್ಲಿ ಈ ಕಾಮಗಾರಿಯು ರಿವರ್ ಟ್ರೈನಿಂಗ್ ಕಾಮಗಾರಿಯಾಗಿರುವುದರಿಂದ ಸಮಿತಿಯ ಪರಿಮಿತಿಯಿಂದ ಹೊರಗಿಡಲು ಸೂಚಿಸಲಾಗಿದ್ದು, ಕಾಮಾಗಾರಿಗಳ ಮಾದರಿ ಅಧ್ಯಯನವನ್ನು ನಡೆಸಲು ಸೂಚಿಸಿರುತ್ತಾರೆ. ಅಂಗಡಿ ಕಮಿಟಿಯಿಂದ ಅನುಮೋದನೆ ಆಗಿರುವುದಿಲ್ಲ. ಅವರ ಸಲಹೆಯಂತೆ ಕಾಮಗಾರಿಗೆ ಮಾದರಿ ಅಧ್ಯಯನವನ್ನು ನಡೆಸಲು ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋದನಾ ಕೇಂದ್ರ, ಕೆ.ಆರ್. ಸಾಗರ ಇವರಿಗೆ ಸೂಚಿಸಲಾಗಿದೆ.

ಇ) 1996-97ನೇ ಸಾಲಿನಲ್ಲಿ 10.00 ಲಕ್ಷ ರೂಗಳ ಅಂದಾಜು ಹಾಗೂ ರೂ. 0.30 ಲಕ್ಷ ರೂ ಅನುದಾನದೊಂದಿಗೆ ಸೇರಿತ್ತು. ಅಂಗಡಿ ಸಮಿತಿಯ ಸಲಹೆಯಂತೆ ಈ ಕಾಮಗಾರಿಯ ಮಾದರಿ ಅಧ್ಯಯನ ನಡೆಸಬೇಕಾಗಿದ್ದುದರಿಂದ, ಅನುದಾನ ಬಿಡುಗಡೆ ಬಗ್ಗೆ ಕ್ರಮ ತೆಗೆದುಕೊಂಡಿರುವುದಿಲ್ಲ.

ಈ) ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ ಕೆ.ಆರ್. ಸಾಗರ ಇವರಿಂದ ವರದಿ ಬಂದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಸೀಮೆ ಎಣ್ಣೆ ವಿತರಣೆಯಲ್ಲಿ ಅವ್ಯವಹಾರ

2072 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸೀಮೆಎಣ್ಣೆ ಹಾಗೂ ಇತರ ವಿತರಣೆಯಲ್ಲಿ ವಂಚನೆ ಮಾಡುತ್ತಿರುವ ಎಷ್ಟು ಪ್ರಕರಣಗಳು ದಾಖಲಾಗಿವೆ. ಈ ಬಗ್ಗೆ ಎಷ್ಟು ನ್ಯಾಯಬೆಲೆ ಅಂಗಡಿ ಅಥವಾ ಪಡಿತರ ವಿತರಣೆಗಾರರ ಮೇಲೆ ಕ್ರಮ ಜರುಗಿಸಲಾಗಿದೆ?

ಆ) ಮಂಗಳೂರು ಬಂದರು ಪ್ರದೇಶದಲ್ಲಿ ಅನೇಕ ವರ್ಷಗಳಿಂದ ಮೆ: ಇಸ್ಮಾಯಿಲ್ ಅಂಡ್